# ಮತ್ತೆ ಪತ್ರ ಬರೆಯುವ...

ಮನುಷ್ಯ ಭಾವಜೀವಿ. ತನ್ನಂತೆಯೇ ಭಾವಕೋಶ ತುಂಬಿದ ಇತರರೊಡನೆ ಅವನ ಸಂಬಂಧ ವ್ಯವಹಾರಿಕವಾಗಿರುವುದಿಲ್ಲ. ಅದು ಎರಡು ಅಂತರಂಗಗಳ ವ್ಯಕ್ತ– ಅವ್ಯಕ್ತ ಭಾವ ಸಂಬಂಧಗಳ ಅಭಿವ್ಯಕ್ತಿ, ಮಾತು, ಭಾವಾಭಿವ್ಯಕ್ತಿಗಳ ಮೂಲಕ ಸಂವಹನಿಸುವ ಅವನು ಇತರ ಪ್ರಾಣಿಗಳಿಗಿಂತ ಭಿನ್ನ. ತನ್ನ ಮನಸ್ಸಿನ ಭಾವಬಣ್ಣಗಳನ್ನು ಪ್ರಕೃತಿಯಲ್ಲಿ ದೊರೆತ ಸಹಜ ಬಣ್ಣಗಳನ್ನು ಬಳಸಿ ಚಿತ್ರಬಿಡಿಸಿದ. ಕಲ್ಲನ್ನು ತನ್ನ ಕುಸುರಿ ಕೆಲಸದಿಂದ ವಿವಿಧಾಕೃತಿಗಳಲ್ಲಿ ಪಡಿಮೂಡಿಸಿ, ಭಾವ ತುಂಬಿ ಕಲೆಯ ಸೊಗಸನ್ನು ಹೆಚ್ಚಿಸಿದ. ಇಷ್ಟೆಲ್ಲಾ ಆದರೂ ಕುಂಚದ ರೇಖೆ, ಉಳಿಯ ಚೂಪು, ಕಂಠದಿಂದ ಬರುವ ಮಾತು ಅನೇಕ ಸಂದರ್ಭಗಳಲ್ಲಿ ಅಭಿವ್ಯಕ್ತಿಸಲಾರದ ಸ್ಥಿತಿ ನಿರ್ಮಾಣವಾಗುತ್ತದೆ. ಅಂಥ ಸ್ಥಿತಿಯಲ್ಲಿ ವ್ಯಕ್ತಿಗೆ ಅಕ್ಷರ ನೆರವಿಗೆ ಬರುತ್ತದೆ.

ಚಿತ್ರದಲ್ಲಿ ಬಿಡಿಸಲಾಗದ, ಮಾತಿನಲ್ಲಿ ಹೇಳಲಾಗದ ಅಂತರಂಗದ ಸತ್ವಗಳು ಅಕ್ಷರದಲ್ಲಿ ರೂಪತಾಳಿ ಸಂವಹನಕ್ಕೆ ಸಿದ್ಧವಾಗುತ್ತವೆ. ಈ ಅಕ್ಷರ ರೂಪವೇ ಪತ್ರ. ಎದುರು ಬದುರು ಕೂತು ಮಾತನಾಡುವಾಗ ಹೇಳಲಾಗದ ಅಂತರಂಗದ ಭಾವಗಳು ಪತ್ರದಲ್ಲಿ ಜೀವತಾಳುತ್ತವೆ. ದೂರವಾಣಿಯಲ್ಲಿ ಮಾತನಾಡುವಾಗ ಅಂತರಂಗವು ಪೂರ್ಣ ಬಿಚ್ಚಿಕೊಳ್ಳಲಾಗದೆ 'ಎದುರು ಸಿಕ್ಕಾಗ ಮಾತನಾಡುವ' ಎಂದು ಮಾತು ನಿಲ್ಲಿಸುತ್ತೇವೆ. ಕೂತು ಮಾತನಾಡುವ ಅನೇಕ ಸಂದರ್ಭಗಳಲ್ಲಿ ಅಂತರಂಗವನ್ನು ಬಿಚ್ಚಿಡಲಾರದೆ ಒದ್ದಾಡುತ್ತೇವೆ. ಆದರೆ, ಪತ್ರ ಬರೆಯುವಾಗ ಮಾತ್ರ ಭಾವಗಳು ಓತ ಪ್ರೋತವಾಗಿ ಹರಿಯುತ್ತವೆ; ಹೇಳುವುದೆಲ್ಲವನ್ನು ಅಭಿವ್ಯಕ್ತಿಸಿದ್ದೇವೆಂಬ ಭಾವಮೂಡಿ ಸರಾಗದ ಉಸಿರು ಹೊಮ್ಮುತ್ತದೆ; ತೃಪ್ತಿಯ ಭಾವ ಮೈಮನಗಳನ್ನು ತುಂಬುತ್ತದೆ.

ಪತ್ರಲೇಖನ ಭಾವಲೋಕದ ತೀರಾ ವೈಯಕ್ತಿಕಾಭಿವ್ಯಕ್ತಿ. ನಾವು ನಮ್ಮ ಸಂಸಾರದ ಸದಸ್ಯರ ಜೊತೆ ನಡೆಸುವ ಪತ್ರ ವ್ಯವಹಾರವು ಅನೇಕ ಸಂದರ್ಭದಲ್ಲಿ ಚಿಕ್ಕದಾಗಿಯೂ ವ್ಯಾವಹಾರಿಕವಾಗಿಯೂ ಇದ್ದುಬಿಡುವ ಸಾಧ್ಯತೆ ಇರುತ್ತದೆ. ಆದರೆ, ಆತ್ಮೀಯ ಗೆಳೆಯ(ತಿ) ನೊಡನೆ ಪತ್ರ ಮುಖೇನ ಸಂವಹನಿಸುವಾಗ, ಪ್ರೇಮಿಯೊಡನೆ ಹೃದಯ ಹಂಚಿಕೊಳ್ಳುವಾಗ, ತಂದೆ – ಮಗಳು, ತಾಯಿ – ಮಗ ಕಷ್ಟಸುಖ ತೋಡಿಕೊಳ್ಳುವಾಗ ಪತ್ರದಲ್ಲಿ ಒಡಮೂಡುವ ಭಾವ ಪ್ರಪಂಚವನ್ನು ಓದಿಯೇ ಅರಿಯಬೇಕು. ಅಲ್ಲಿ ಪ್ರೀತಿ ಇರುತ್ತದೆ; ಆರೈಕೆ – ಹಾರೈಕೆ ಇರುತ್ತದೆ; ಜಗಳ, ಹಾಸ್ಯ, ಲೇವಡಿ ಮುಂತಾದ ರಸಗಂಗೆ ಮೈತುಂಬಿ ಹರಿಯುತ್ತದೆ; ವಿಚಾರ, ವಿವೇಕಗಳು ಮೃದುವಾದ ಭಾವಸ್ಪರ್ಶದ ಮೂಲಕ ಅಕ್ಷರರೂಪ ತಾಳಿರುತ್ತವೆ.

ಕಳೆದ ಕಾಲುಶತಮಾನದಿಂದೀಚೆಗೆ ಈ ಪತ್ರಲೇಖನ ಕಡಿಮೆಯಾಗಿದೆ. ಆಧುನಿಕ ತಂತ್ರಜ್ಞಾನ ತಂದುಕೊಟ್ಟಿರುವ ಮೊಬೈಲ್ ಫೋನುಗಳಿಂದಾಗಿ ವ್ಯಕ್ತಿ ಪತ್ರ ಬರೆಯುವುದನ್ನು ನಿಲ್ಲಿಸಿದ್ದಾನೆ. ಮೊಬೈಲ್ ಫೋನಿನಿಂದಾಗಿ ಅವನು ಕಾಯುವ ಸುಖವನ್ನು ಕಳೆದುಕೊಂಡಿದ್ದಾನೆ. ಕಾಯುವುದರಲ್ಲಿರುವ ಸುಖವು ಪತ್ರ ತಂದುಕೊಡುತ್ತಿದ್ದ ಮತ್ತೊಂದು ಜೀವಿಯ ಅಂತರಂಗ ಸೋಪಾನದ ನಿರೀಕ್ಷೆಯಲ್ಲಿ ವಿಹರಿಸುತ್ತಿತ್ತು. ಸೂರ್ಯೋದಯ – ಸೂರ್ಯಾಸ್ತದ ಕತ್ತಲೆಬೆಳಕಿನಾಟದಲ್ಲಿ ಲೆಕ್ಕಹಾಕಿ ದಿನ ಎಣಿಸುತ್ತಿದ್ದ ಆ ದಿನಗಳಲ್ಲಿರುತ್ತಿದ್ದ ಕಾತರ, ಭಯ; 'ಪತ್ರ ಏಕೆ ಬರೆಯಲಿಲ್ಲ, ಅದು ಏಕೆ ಬರುತ್ತಿಲ್ಲ'ವೆಂಬ ಕೋಪ – ಈ ಭಾವತೀವ್ರತೆಯ ಸುಖವನ್ನು ಈ ತಲೆಮಾರು ಕಳೆದುಕೊಂಡಿದೆ. ಕ್ಷಣ ಕ್ಷಣಕ್ಕೂ ಮೊಬೈಲ್ ಫೋನ್ ಮೂಲಕ ಹರಿದಾಡುತ್ತಿರುವ ಸಂದೇಶಗಳು– ವಾಟ್ಸ್‌ಆ್ಯಪ್‌ಗಳು ಕುತೂಹಲವನ್ನು ಮರೆಸಿವೆ. ಎಲ್ಲವೂ ಕ್ಷಣದಲ್ಲೇ ಸಂಭವಿಸುವುದರಿಂದ ಕಾದು ಅನುಭವಿಸುವ ಸುಖ ಮಾಯವಾಗಿದೆ. ಈಗಿನ ಕಾಲದ ದಿಢೀರ್ ಫಾಸ್ಟ್ ಫುಡ್‌ನಂತೆಯೇ ಈಗ ಇಬ್ಬರು ವ್ಯಕ್ತಿಗಳ ಭಾವಾಭಿವ್ಯಕ್ತಿಯು ವೇಗವೂ ಕ್ಷಣಿಕವೂ ಆಗಿ ರೂಪತಾಳಿದೆ.

ಅಂದು ಅಂಚೆಯಣ್ಣನ ನಿರೀಕ್ಷೆಯಲ್ಲಿರುವುದೇ ರೋಮಾಂಚನ ತರುತ್ತಿತ್ತು. ದಿನಕ್ಕೆ ಎರಡು ಬಾರಿ ಅವನು ಬಂದು ಹೋಗುವ ಸಮಯದಲ್ಲಿ ಬಾಗಿಲಲ್ಲೇ ಅವನಿಗಾಗಿ ಕಾದು, ಅವನು ಪತ್ರ ನೀಡದಿದ್ದರೆ ಆಗುವ ನಿರಾಶೆಯನ್ನು ಮತ್ತೊಂದು ಪತ್ರ ಬರೆದೇ ಅಭಿವ್ಯಕ್ತಿಸಬೇಕಾಗುತ್ತಿತ್ತು. ಆಗ ಅಂಚೆಯಣ್ಣ ತಂದುಕೊಡುತ್ತಿದ್ದ ಪತ್ರ ಎಲ್ಲೋ ದೂರದೂರಲ್ಲಿ ನಮಗಾಗಿ ಮಿಡಿಯುತ್ತಿರುವ ಹೃದಯವೊಂದು ಎದೆತೆರೆದು ಮಾತನಾಡಿದ ಸುಖಮಯ ಧ್ವನಿಗಳು. ಆ ಪತ್ರವನ್ನು ಒಮ್ಮೆ ಓದಿದರೆ ತೃಪ್ತಿಯಿಲ್ಲ! ಅದನ್ನು ದಿನಕ್ಕೆರಡು ಬಾರಿ ಓದಿ, ಮತ್ತೊಂದು ಪತ್ರದ ನಿರೀಕ್ಷೆಯಲ್ಲಿ ಜೋಪಾನಮಾಡಲಾಗುತ್ತಿತ್ತು.

ಪತ್ರಸಾಹಿತ್ಯ ಸಾಹಿತ್ಯ ಪ್ರಕಾರಗಳಲ್ಲೇ ಅತ್ಯಂತ ವಿಶಿಷ್ಟವಾದುದು; ಇದು ಬಹುತೇಕ ಕಾಲ್ಪನಿಕವಲ್ಲ. ಎರಡು ವ್ಯಕ್ತಿಗಳ ಹೃದಯ ಸಂವಾದ. ಅರ್ಧ ಶತಮಾನಕ್ಕಿಂತ ಹಿಂದೆ ನವರತ್ನರಾಮರಾಯರು 'ಪ್ಯಾರಿಸ್ಸಿನಿಂದ ಪ್ರೇಯಸಿಗೆ' ಬರೆದ ಪತ್ರಸಂಕಲನವನ್ನು, ಸಿ.ಕೃಷ್ಣ ಬರೆದ 'ಮುಗುದೆಯರ ಪತ್ರಗಳು' ಕೃತಿಯನ್ನು ಓದಿ ಆನಂದಿಸಿಯೇ ಅನುಭವಿಸಬೇಕು. ಜವಹರಲಾಲ್ ನೆಹರೂ ಸೆರೆಮನೆಯಿಂದ ತಮ್ಮ ಮಗಳು ಪ್ರಿಯದರ್ಶಿನಿಗೆ ಬರೆದ 'ಡಿಸ್ಕವರಿ ಆಫ್ ಇಂಡಿಯಾ' ಮತ್ತು ಗಾಂಧೀಜಿ ಬರೆದ ನೂರಾರು ಪತ್ರಗಳ ಸಂಕಲನಗಳನ್ನು ಓದಿ ಜ್ಞಾನಾನುಭವವನ್ನು ಹೆಚ್ಚಿಸಿಕೊಳ್ಳಬಹುದು.

ನಾವು ಪತ್ರ ಬರೆಯುವ ಕಲೆಯನ್ನು ಮತ್ತೆ ಪ್ರಾರಂಭಿಸೋಣವೇ?

■ **ಶಿಕಾಕು**

## ಮಾತೇ ಮುತ್ತು

★ ಬದುಕಿನ ಮುಸ್ಸಂಜೆಗೆ ಶಿಕ್ಷಣ ಒಳ್ಳೆಯ ಇಡುಗಂಟು.

-ಅರಿಸ್ಟಾಟಲ್

★ ಶ್ರೀಮಂತ ಮನುಷ್ಯನೆಂದರೆ ಕೈಯಲ್ಲಿ ಹಣ ಇಟ್ಟುಕೊಂಡಿರುವ ಬಡವ, ಅಷ್ಟೆ.

–ಡಬ್ಲ್ಯು.ಸಿ. ಫೀಲ್ಡ್

★ ಪ್ರಾಮಾಣಿಕತೆಯೇ ಅತ್ಯುತ್ತಮ ನೀತಿ– ಹಣ ಇದ್ದಾಗ.

-ಮಾರ್ಕ್ ಟ್ವೈನ್

★ ಬುದ್ಧಿವಂತ ಮನುಷ್ಯ ಹಣವನ್ನು ತಲೆಯಲ್ಲಿ ಇಟ್ಟುಕೊಳ್ಳುತ್ತಾನೆ, ಹೃದಯದಲ್ಲಲ್ಲ.

-ಜೊನಾಥನ್ ಸ್ವಿಫ್ಟ್

★ ಕೇವಲ ಹಣ ಒಂದನ್ನೇ ಮಾಡುವ ಉದ್ಯಮ ನಿಜಕ್ಕೂ ಒಂದು ಬಡ ಉದ್ಯಮ.

-ಹೆನ್ರಿ ಫೋರ್ಡ್

★ ಹಣದ ಜತೆಗೇ ಶಿಕ್ಷಣ ಹೊಂದಿರುವುದು ಅನಕ್ಷರತೆಗಿಂತ ಕಡೆ.

-ಸಾಕ್ರೆಟಿಸ್

★ ವ್ಯಾಪಾರ ಎಂದರೆ ಇತರರ ಹಣದಲ್ಲಿ ನಡೆಸುವುದು.

-ಅಲೆಕ್ಸಾಂಡರ್ ಡ್ಯುಮಾಸ್

★ ಕ್ರಾಂತಿ ಎಂದರೆ ಹಳೆಯದರ ನಾಶವಲ್ಲ. ಹಳೆಯದರ ಒಳಿತನ್ನು ಅದನ್ನು ಉಳಿಸಿಕೊಂಡು ಹೊಸ ಬದುಕನ್ನು ಕಟ್ಟಿಕೊಳ್ಳುವುದು.

-ಜಿ.ಎಸ್.ಶಿವರುದ್ರಪ್ಪ

★ ನಾವು ಬಯಸಿದಂತೆ ಬದುಕುವ ಸ್ವಾತಂತ್ರ್ಯ ಯಾವತ್ತೂ ಭಯಾನಕ ಹೋರಾಟದ ಫಲವೇ ಹೊರತು ಸುಲಭಕ್ಕೆ ಸಿಗುವುದಲ್ಲ.

-ಪೂರ್ಣ ಚಂದ್ರ ತೇಜಸ್ವಿ

★ ಅರ್ಥವಿಲ್ಲದ ಪ್ರಶ್ನೆಗೆ ಸುಮ್ಮನಿರುವುದೇ ಉತ್ತರ.

-ಕುವೆಂಪು

★ ಒಬ್ಬ ಮನುಷ್ಯ, ಆತನ ಸ್ನೇಹಿತರು ಹೊಗಳಿ ಹಾಡುವಷ್ಟು ಒಳ್ಳೆಯವನೂ ಇರುವುದಿಲ್ಲ, ಅವನಿಗಾಗದವರು ತೆಗಳಿ ತಿರಸ್ಕರಿಸುವಷ್ಟು ಕೆಟ್ಟವನೂ ಇರುವುದಿಲ್ಲ.

-ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ಮನೆ ನಿಂತಿರುವುದು ಮಡದಿಯಿಂದ, ಅದು ಬಿದ್ದರೆ ಗಂಡನ ತಲೆ ಮೇಲೆ!

-ಬೀಚಿ

★ ಯುದ್ಧ ಮಾಡುವವು ಶಸ್ತ್ರಗಳಲ್ಲ. ಶಸ್ತ್ರಗಳ ಹಿಂದಿನ ಶಕ್ತಿಗಳು; ಅದಕ್ಕಿಂತ ಖಚಿತವಾಗಿ ಹೇಳುವುದಾದರೆ– ನಾವು ಒಪ್ಪಿಕೊಂಡ ಜೀವನ ಕ್ರಮ.

-ಪಿ.ಲಂಕೇಶ್